ನಿರ್ಲಕ್ಷ್ಯ ಇರಬಾರದು. ಮಾನವರ ಜೀವ ವಿಕಾಸದಲ್ಲಿ ಊಸಿನ ಪಾತ್ರ ಏನು ಎಂದು ಸಂಶೋಧನೆ ಮಾಡಿರುವ ವಿಜ್ಞಾನಿಗಳಿಗೆ ನೊಬೆಲ್ ಪಾರಿತೋಷಕ ಸಿಕ್ಕಿದೆ ಎಂಬುದು ನಿಮಗೆ ಗೊತ್ತಿರ್ಲಿ. ಗ್ಯಾಸ್ ಈಸ್ ಯಾನ್ ಇನ್‌ಫ್ಲೆಮೇಟರಿ ಆಕ್ಟಿವಿಟಿ. ನಮ್ಮ ಗೆಲಾಕ್ಸಿಯಲ್ಲು ಗ್ಯಾಸ್ ಇದೆ; ಹೊಟ್ಟೆಯಲ್ಲು ಗ್ಯಾಸು ರಿಲೀಸ್ ಆಗ್ತನೇ ಇರುತ್ತೆ. ಬದುಕಿರುವವರು ಮಾತ್ರ ಊಸು ಬಿಡಲು ಸಾಧ್ಯ' ಎಂದು ಹೈಪರ್ ಆದ ಉದ್ಯಮಿ. 'ಹಾಗಾದ್ರೆ ಆಳುವವರೆಲ್ಲ ಊಸ್ತಾನೆ ಇದ್ದಾರಲ್ಲಾ... ಅದನ್ನು ಹೇಗೆ ಸಮರ್ಥಿಸಿಕೊಳ್ಳೀರಿ' ಎಂದು ಗೋವಿಂದ ಅಡ್ಡ ಬಾಯಿ ಹಾಕಿದ. 'ರೀ ಅವೆಲ್ಲ ಪೊಲಿಟಿಕಲೀ ಗೋಲ್ಡನ್ ಊಸುಗಳು ಕಣ್ರೀ... ಗೋಬರ್ ಗ್ಯಾಸ್ ಅನ್ಕಂಡ್ರಾ' ಎಂದು ನಗಡಾಡಿದ ಪರಮಾನಂದ. ನಿಶೆಯಲ್ಲಿ ಮಾತುಗಳು ಗ್ಯಾಸುಗಳ ಜೊತೆ ಕೈ ಮಿಲಾಯಿಸಿದ್ದವು.

ಗೋವಿಂದ ಹತಾಶೆಯಲ್ಲಿ ರಾಗ ಎಳೆದ; 'ನಾವಿನ್ನೂ ಈ ಹೇಸಿಗೆ ಊಸು ಆ ಸುಳ್ಳು ಆ ಕೊಲೆ ಅನ್ಯಾಯ ಲೂಟಿ ವಿಷಯಗಳ ಬಗೆಗೇ ಮಾತಾಡಬೇಕೇ... ಇನ್ನೂ ಗ್ಯಾಸಲ್ಲೆ ಇರಬೇಕೇ... ಥೂ ಥೂ ನನಗಂತು ಕೇಳಿ ಕೇಳಿ ಕಿವಿ ಕಿತ್ತೋದ ಎಕ್ಕಡ ಆಗೋಗಿದ್ದವಪ್ಪಾ' ಎಂದು ವಿಷಯಾಂತರ ಮಾಡಲು ಯತ್ನಿಸಿದ. ಊಸಿನ ವಾಸನೆಗಳು ಅಲ್ಲಿ ಅವರ ತಲೆ ಮೇಲೆ ಶೀತಲ ವಿಶ್ವ ಸಮರದಂತೆ ಬಿಗಡಾಯಿಸಿದ್ದವು. 'ಗ್ಯಾಸ್ ಛೆಂಬರ್ ಬಗೆಗಾದ್ರೂ ಮಾತಾಡ್ರೀ... ಆ ಇಟ್ಲರ್ ಸರ್ವಾಧಿಕಾರಿಯ ಜನಾಂಗ ದ್ವೇಷದ ಮಾರಣ ಹೋಮದ ಬಗ್ಗೆ ಚರ್ಚೆ ಮಾಡ್ರೀ' ಎಂದು ಅಂಗಲಾಚಿದ. ಪ್ರಾಧ್ಯಾಪಕರ ನೆತ್ತಿಯಲ್ಲಿ ಕನ್ನೆಯ ಮಳೆ ಸುರಿಯುತ್ತಿತ್ತು. ಇದ್ದಕ್ಕಿದ್ದಂತೆ ಮೆದುಳಿನ ಯಾವುದೊ ಮೂಲೆಯಿಂದ ಚುಳುಕ್ ಎಂದು ಪಾದದ ತನಕ ಎಳೆದಂತಾಯಿತು. 'ನಿಮ್ಮಲ್ಲಿ ಸಿ.ಸಿ.ಟಿವಿ ಅವಳಡಿಕೆ ಇದೆಯೇ' ಎಂದು ಗೆಳೆಯ ಜೀನಿಯಸ್‌ನ ಹೆಗಲು ಹಿಡಿದು ಕೇಳುತ್ತಿದ್ದ. 'ಅವೆಲ್ಲ ಇರ್ತಾವ್ರೀ, ನಾವೇ ತಾನೆ ಅವನ್ನೆಲ್ಲ ಫಿಕ್ಸ್ ಮಾಡಿರೋದೂ' ಎನ್ನುತ್ತಿದ್ದ ಮಾತು ಕುಹಕವಾಗಿ ತೇಲಿಹೋಯಿತು. 'ಆದರೆ ಕೆಳಗೆ ಹೋಗೊ ಗ್ಯಾಸನ್ನ ನಾವಲ್ಲವಲ್ಲಾ ಫಿಕ್ಸ್ ಮಾಡಿರೋದು' ಎನ್ನುತ್ತಿದ್ದ ಗೋವಿಂದ. ಪ್ರಾಧ್ಯಾಪಕರು ಸುಟ್ಟ ಚಿಕನ್ ತೊಡೆಯನ್ನು ಯಮಭಯಂಕರವಾಗಿ ಕಡಿಯುತ್ತಿದ್ದರು. ಮಂದ ಬೆಳಕು ಅಮಲಿನ ಹೆಣ್ಣಿನಂತೆ ಲಾಸ್ಯವಾಡುತ್ತಿತ್ತು. 'ಈ ಭೂಮಿಯೂ ಆಗಾಗ ಹೊಗೆ ಬೆಂಕಿ ಲಾವಾ ಉಕ್ಕಿಸಿ ಊಸುತ್ತದೆ' ಅಲ್ಲವೇ' ಎಂದು ಗೆಳೆಯ ಕೇಳುತ್ತಿದ್ದ. 'ಆಕಾಶದ ತುಂಬ ಗ್ಯಾಸ್ ಇದೇರಿ... ಅದೆಲ್ಲ ಸರಿಯಾಗಿ ಇನ್ನೂ ಪತ್ತೆ ಆಗಿಲ್ಲ' ಎಂದು ಜೀನಿಯಸ್ ತನ್ನ ಪ್ರತಿಭೆಯ ಬಲ ತೋರುವಂತೆ ಆಕಾಶದತ್ತ ಕೈ ತೋರಿ ಏನೇನೊ ವಿವರಿಸುತ್ತಿದ್ದ. 'ನಿಮ್ಮಲ್ಲಿ ಲೇಡಿ ಬಾಡಿಗಾರ್ಡ್‌ಗಳು ಇಲ್ಲವೇ' ಎಂದು ಪ್ರಾಧ್ಯಾಪಕರು ಅಧಿಕವಾಗಿ ಕೇಳುತ್ತಿದ್ದರು. 'ಯಾಕಿಲ್ಲಾ; ಅದೆಲ್ಲ ಉಂಟು... ನಿಮಗೆ ಬೇಕಿದ್ದರೆ ಹೇಳಿ ಈಗಲೆ ವ್ಯವಸ್ಥೆ ಮಾಡುವ' ಎಂದ. ಕೂಡಲೆ ಇಬ್ಬರು ಅರೆಬೆತ್ತಲೆ ಚೆಲುವೆಯರು ಪ್ರತ್ಯಕ್ಷವಾದರು. ನಮ್ಮ ಇಡೀ ವರ್ತನೆಯೆ ಬದಲಾಯಿತು. ಬಹಳ ಯೋಗ್ಯರಂತೆ ನಟಿಸಿದೆವು. ಗೋವಿಂದ ಆ ಬೆಡಗಿಯ ಸೊಂಟವನ್ನೇ ದಿಟ್ಟಿಸುತ್ತಿದ್ದ. ಊಸಿನ ವಿಷಯ ಮರೆಯಾಗಿತ್ತು. ತಂಗಾಳಿ ಬೀಸಿತ್ತು. ಭಾಗಶಃ ಆ ಗಾಳಿಯು ಚೆಲುವೆಯರ ಹಿಂಬಾಲಿಸಿ ಬಂದಿತ್ತೇನೊ. ಅದು ಸರಸದ ಸಮಯವಾಗಿರಲಿಲ್ಲ. ದೇಶದ ಆಂತರಿಕ ದಕ್ಷತೆಯ ಬಗ್ಗೆ ಜೀನಿಯಸ್ ಮಾತಾಡುತ್ತಿದ್ದ. ಹಿಂದೆಂದೂ ಇರದಿದ್ದಷ್ಟು ಭವಿಷ್ಯ ನಮ್ಮ ದೇಶಕ್ಕೆ ಇದೆ ಎನ್ನುತ್ತಿದ್ದಂತೆಯೆ ಗೋವಿಂದ ತಗಾದೆ ತೆಗೆದಿದ್ದ. 'ರೀ ಗೋವಿಂದೂ; ಸ್ವಲ್ಪ ಸುಮ್ನೆ ಇರ್ರೀ... ಯಾವಾಗ್ಲೂ ವಿರೋಧ ಪಕ್ಷದವರ ಅವಿವೇಕದಂತೆಯೆ ವರ್ತಿಸುತ್ತೀರಲ್ಲಾ... ಆಳುವವರ ಸಮಸ್ಯೆಯ ಬಗೆಗೂ ಆಲೋಚನೆ ಮಾಡ್ರೀ' ಎಂದರು ಪ್ರಾಧ್ಯಾಪಕರು. ಅಹಾ! ಏನಚ್ಚರೀ; ಚೆಲುವೆಯರು ಬಂದ ನಂತರ ಪ್ರಾಧ್ಯಾಪಕರ ವರ್ತನೆ ಅಲ್ಲಾ, ವಿಚಾರಗಳೇ ಬುಡಮೇಲಾಗಿದ್ದವು. ಏನೂ ಮಾಡುವಂತಿರಲಿಲ್ಲ. ಆಂತರಿಕ ಭದ್ರತೆಯೊ ಅಭದ್ರತೆಯೊ ಅಸಾಮರ್ಥ್ಯವೊ ತಿಳಿಯದಂತಾಯಿತು. 'ಇವೆಲ್ಲ ಇರ್ಲೀ ಸಾರ್... ನಿಮ್ಮ ಬಿಸಿನೆಸ್ ಭದ್ರತೆ ಹೇಗಿದೆ ಹೇಳಿ... ಏನೇನು ಜನೋಪಯೋಗಿ ಕಾರ್ಯಕ್ರಮಗಳಿವೆ... ಲೋಕಸಭೆಯ ಮೇಲ್ಮನೆಗೆ ನಿಮ್ಮನ್ನು ನಾಮಿನೇಟ್ ಮಾಡ್ತಾರೆ ಅನ್ನೊ ಸುದ್ದಿ ಇದೆ' ಎಂದು ವಿಷಯ ಬದಲಿಸಿದ ಗೆಳೆಯ. 'ನಾವ್ಯಾಕ್ರಿ ಅಲ್ಲಿ ಹೋಗಿ ಕೂರಬೇಕು. ಅಲ್ಲಿ ನಮ್ಮವರ ಕೂರಿಸಿ ರಿಮೋಟ್ ಕಂಟ್ರೋಲ್ ಮಾಡಿದ್ರೆ ಸಾಕಲ್ಲವೇ' ಎನ್ನುತ್ತಿದ್ದ ಜೀನಿಯಸ್.

'ಅಲ್ಲಾ; ನಾವು ಯಾವ ಉದ್ದೇಶದಿಂದ ಇಲ್ಲಿಗೆ